**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ. ಸಂಖ್ಯೆ: 1041/2025**

ಫ್ರಾಸಾ – 3

ಚಾಸಾ – 3

**ಸಾಕ್ಷಿಯು ದಿಃ 04.12.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಹೆಸರು | : | ನಾರಿ |
| ಗಂಡನ ಹೆಸರು | : | ನಾಗ |
| ವಯಸ್ಸು | : | 42 ವರ್ಷ |
| ವೃತ್ತಿ | : | ಕೂಲಿ |
| ವಾಸಸ್ಥಳ | : | ಚೆನ್ನಿಕಟ್ಟೆ |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :-**

ಚಾಸಾ 1, 2 ಮತ್ತು 4 ಗೊತ್ತು. ಆರೋಪಿಗಳು ನನಗೆ ಗೊತ್ತಿಲ್ಲ. ನಾನು ಯಾವುದೇ ಗಲಾಟೆ ನೋಡಿಲ್ಲ ಮತ್ತು ಬಿಡಿಸಿಲ್ಲ. ಚಾಸಾ 1 ರವರು ಆರೋಪಿಗಳ ವಿರುದ್ಧ ದೂರು ನೀಡಿರುವ ವಿಚಾರ ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ, ನಾನು ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು , ಅನುಮತಿ ನೀಡಲಾಗಿದೆ)

**ಪಾಟೀ ಸವಾಲು :- ಮಾನ್ಯ ಎಪಿಪಿಯವರಿಂದ :-**

ದಿಃ 04.09.2022 ರಂದು ಮದ್ಯಾಹ್ನ 12.30ರ ಸಮಯದಲ್ಲಿ ಚಾಸಾ 2 ರವರ ಜಮೀನಿಗೆ ಹೊಂದಿಕೊಂಡಿರುವಂತಹ ಆರೋಪಿಗಳ ಜಮೀನಿನ ತೇವರಿಯಲ್ಲಿ ಚಾಸಾ 1 ರಿಂದ 4 ರವರು ಕೆಲಸ ಮಾಡುತ್ತಿದ್ದಾಗ, 1ನೇ ಆರೋಪಿಯ ಹಸು, ತಂತಿ ಬೇಲಿ ದಾಟಿ ಚಾಸಾ 2 ರವರ ಜಮೀನಿಗೆ ಬರುತ್ತಿರುವುದನ್ನು ನೋಡಿ ಹಸುವನ್ನು ಜಮೀನಿಗೆ ಬಾರದಂತೆ ಕಟ್ಟಿಹಾಕಲು 2ನೇ ಆರೋಪಿಗೆ ಹೇಳಲು ಹೋದಾಗ 2ನೇ ಆರೋಪಿ ಚಾಸಾ 1 ರವರನ್ನು

ಅವಾಚ್ಯ ಶಬ್ಧಗಳಿಂದ ಬೈದು, 1 ಮತ್ತು 2ನೇ ಆರೋಪಿಗಳು ಚಾಸಾ 1 ರವರ ಕುತ್ತಿಗೆ ಹಿಡಿದು ಜಗ್ಗಾಡಿ, ಗಲಾಟೆ ಬಿಡಿಸಲು ಬಂದು ಚಾಸಾ 2 ರವರನ್ನು ಆರೋಪಿಗಳು ಅವಾಚ್ಯ ಶಬ್ಧಗಳಿಂದ ಬೈದು ಹೋಗುವಾಗ 1ನೇ ಆರೋಪಿ ದೊಣ್ಣೆಯಿಂದ ಚಾಸಾ 2 ರವರಿಗೆ ಹೊಡೆಯಲು ಪ್ರಯತ್ನಿಸಿದ್ದು, 2ನೇ ಆರೋಪಿ ತಲೆಯಿಂದ ಚಾಸಾ 2 ರವರ ಕಣ್ಣಿನ ಬಲಭಾಗಕ್ಕೆ ಎದೆಗೆ ಹೊಡೆದು, ಚಾಸಾ 2 ಮತ್ತು ನನಗೆ ಆರೋಪಿಗಳಿಬ್ಬರೂ ಸಾಯಿಸುವುದಾಗಿ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದು ಈಗ ಓದಿ ಹೇಳಿದಂತೆ ನಿಪಿ 1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

2. ದಿಃ 05.09.2022 ರಂದು ನಾನು ತೋರಿಸಿದ ಸ್ಥಳದಲ್ಲಿ ಚಾಸಾ 5 ಮತ್ತು 6 ರವರ ಸಮಕ್ಷಮ ನಿಪಿ 2 ರಂತೆ ಸ್ಥಳ ಪಂಚನಾಮೆ ಜರುಗಿಸಿ ದೊಣ್ಣೆ ಮತ್ತು ಕಲ್ಲನ್ನು ವಶಪಡಿಸಿಕೊಂಡು ಸಹಿ ಪಡೆದಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ತನ್ನ ಹೇಳಿಕೆ ನಿರಾಕರಿಸಿದ್ದರಿಂದ ಅದನ್ನು ನಿಪಿ 3 ಎಂದು ಗುರ್ತಿಸಲಾಯಿತು. ಆರೋಪಿಯೊಂದಿಗೆ ಪ್ರಕರಣ ರಾಜೀ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆದ ಕಾರಣ ನಿಪಿ 1 ರಿಂದ 3ರ ವಿಚಾರಗಳು ಗೊತ್ತಿದದರು ಸಹ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು :- ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ